# ಇಸ್ರೇಲ್‌ನ ಸಂಸದೀಯ ನಿಯೋಗದಿಂದ ರಾಷ್ಟ್ರಪತಿಯವರ ಭೇಟಿ

ಮಾರ್ಚ್ 31, 2023

ನೆಸೆಟ್‌ನ ಸ್ಪೀಕರ್ ನೇತೃತ್ವದಲ್ಲಿ ಇಸ್ರೇಲ್‌ನಿಂದ ಸಂಸದೀಯ ನಿಯೋಗ, H.E. ಶ್ರೀ ಅಮೀರ್ ಒಹಾನಾ ಅವರು ಇಂದು (ಮಾರ್ಚ್ 31, 2023) ರಾಷ್ಟ್ರಪತಿ ಭವನದಲ್ಲಿ ಭಾರತದ ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಿದರು.

ನಿಯೋಗವನ್ನು ಸ್ವಾಗತಿಸಿದ ರಾಷ್ಟ್ರಪತಿ, ಕಳೆದ 30 ವರ್ಷಗಳಲ್ಲಿ ಉಭಯ ದೇಶಗಳ ನಡುವಿನ ರಾಜತಾಂತ್ರಿಕ ಸಂಬಂಧಗಳು ಬಹು ಆಯಾಮದ ಕಾರ್ಯತಂತ್ರದ ಪಾಲುದಾರಿಕೆಯಾಗಿ ಬೆಳೆದಿದೆ ಎಂದು ಹೇಳಿದರು.

ಅವರ ಧೀರ್ಘ ಕಾಲೀನ ಇತಿಹಾಸದುದ್ದಕ್ಕೂ , ಭಾರತದಲ್ಲಿ ನೇನೆಸಿರುವ ಯಹೂದಿಯರು ಅವರ ಅನನ್ಯ ಪರಂಪರೆ ಮತ್ತು ಸಂಪ್ರದಾಯಗಳನ್ನು ಕಾಪಾಡಿಕೊಂಡು ಬಂದಿದ್ದಾರೆ ಮತ್ತು ಸಮೃದ್ಧಪಡಿಸಿದ್ದಾರೆ ಎಂದು ರಾಷ್ಟ್ರಪತಿ ಹೇಳಿದರು. ಯಹೂದಿ ಸಮುದಾಯದವರು ಹಿಂದೆಯೂ , ಈಗಲೂ ಮತ್ತು ಯಾವಾಗಲೂ ಭಾರತದ ಸಂಯೋಜಿತ ಸಮಾಜದ ಅವಿಭಾಜ್ಯ ಅಂಗವಾಗಿರುತ್ತರೆ ಎಂದು ಹೇಳಿದರು

ಭಾರತದಲ್ಲಿ, ಇಸ್ರೇಲ್ ಸುಧಾರಿತ ಕೃಷಿ ಮತ್ತು ಜಲ ತಂತ್ರಜ್ಞಾನಗಳಲ್ಲಿ ಪರಿಣತಿಯ ಪ್ರಮುಖ ಮೂಲವಾಗಿ ಹೆಸರುವಾಸಿಯಾಗಿದೆ ಎಂದು ರಾಷ್ಟ್ರಪತಿ ಹೇಳಿದರು. ಸಂಶೋಧನೆ ಮತ್ತು ನಾವೀನ್ಯತೆಯಲ್ಲಿನ ನಮ್ಮ ಸಹಯೋಗವು 'ಮೇಕ್ ಇನ್ ಇಂಡಿಯಾ' ಉಪಕ್ರಮವನ್ನು ಉತ್ತೇಜಿಸಿದೆ ಎಂದು ಹೇಳಿದರು. ಭಾರತದಾದ್ಯಂತ ಇಸ್ರೇಲ್ ನೆರವಿನೊಂದಿಗೆ ಸ್ಥಾಪಿಸಲಾದ 'ಸೆಂಟರ್ಸ್ ಆಫ್ ಎಕ್ಸಲೆನ್ಸ್' ಯಶಸ್ಸನ್ನು ಗಮನಿಸಿ ಅವರು ಸಂತೋಷಪಟ್ಟರು.

**ನವ ದೆಹಲಿ**

**ಮಾರ್ಚ್ 31, 2023**